ನಿರ್ಣಯವನ್ನು ಮಾಡತಕ್ಕಂಥದ್ದು ಕೂಡ ನನ್ನ ಮನಸ್ಸಿನಲ್ಲಿ ತುಂಬಾ ಸಮಾಧಾನಕರವಾದ ನಿರ್ಣಯ ವಲ್ಲ. ನಾವು ಅವರನ್ನು ೧೦ ರೂಪಾಯಿಗಳ ದಿನಕೂಲಿ ಕೊಡತಕ್ಕಂಥ ನಿಬಂಧನೆಯ ಮೇಲೆ ತೆಗೆದು ಕೊಂಡಿದ್ದರೂ, ಅವರಿಗೆ ಕಿರುಕುಳವಾಗಬಾರದೆಂಬ ದೃಷ್ಟಿಯಿಂದ ಅವರಿಗೆ ಮುಂತ್ಲಿವೇಜಸ್, ಲೀವ್ ಬೆನಿಫಿಟ್ ಇವುಗಳನ್ನೆಲ್ಲ ಕೊಟ್ಟುಕೊಂಡು ಬಂದಿರುತ್ತೇವೆ. ೧-೪-೧೯೮೨ ರಿಂದ ೯,೯೧೬ ಜನ ನೇಮಕವಾಗಿದ್ದರೂ ಇವರು ನಮ್ಮ ಇಲಾಖೆಯಲ್ಲಿ ಅವಶ್ಯಕತೆಗೆ ಅನುಗುಣವಾಗಿ ನೇಮಕವಾಗಿಲ್ಲವೆಂದು ಸ್ಪಷ್ಟೀಕರಣ ಮಾಡಲಿಕ್ಕೆ ಇಚ್ಛೆ ಪಡುತ್ತೇನೆ. ಸ್ಥಳೀಯವಾಗಿ ಒತ್ತಡಕ್ಕೆ ಮಣಿದು ಅಧಿಕಾರಿಗಳು ಅಲ್ಲಲ್ಲಿ ನೇಮಕಾತಿ ಮಾಡಿಕೊಂಡಿರುತ್ತಾರೆ. ಯಾರಾದರೂ ಬಂದು ಸಹಾಯ ಮಾಡಬೇಕೆಂದು ಕೇಳಿ ಕೊಂಡಾಗ ನಮ್ಮ ಇಲಾಖೆಯ ಅಸಿಸ್ಟೆಂಟ್ ಇಂಜಿನೀಯರು, ಎಕ್ಸಿಕ್ಯೂಟೀವ್ ಇಂಜಿನೀಯರ್‌ರವರು, ಚೀಫ್ ಇಂಜಿನಿಯರ್‌ರವರು ಕೆಲವರನ್ನು ಕೆಲಸಕ್ಕೆ ತೆಗೆದುಕೊಂಡಿರತಕ್ಕಂಥ ಸಂದರ್ಭಗಳು ಇರುತ್ತದೆ. ಆದ್ದರಿಂದ ಅವರೆಲ್ಲರುಗಳನ್ನು ಖಾಯಂಗೊಳಿಸುವುದಕ್ಕೆ ಸಾಧ್ಯವಿಲ್ಲ. ಈವತ್ತು ೯,೯೧೭ ಜನರು ಏನು ಇರುತ್ತಾರೆ ಅವರೆಲ್ಲರನ್ನು ಮುಂದುವರಿಸಿಕೊಂಡು ಹೋಗಬೇಕೆಂದರೆ ಸುಮಾರು ೪ ಕೋಟಿ ರೂಪಾಯಿ ಗಳು ಖರ್ಚಾಗುತ್ತದೆ. ಲೋಕೋಪಯೋಗಿ ಇಲಾಖೆಯಲ್ಲಿ ಕೆಲಸಕ್ಕೆ ದುಡ್ಡಿಲ್ಲವೆಂದು ಹೇಳತಕ್ಕಂಥ ಸಂದರ್ಭದಲ್ಲಿ ಕೆಲಸ ಇಲ್ಲದವರನ್ನು ಇಟ್ಟುಕೊಂಡು ಏನು ಮಾಡಬೆಕು ? ಯಾವರೀತಿ ಮಾಡಬೇಕು ಎನ್ನುವುದು ಪ್ರಶ್ನೆ ಬೆರುತ್ತದೆ. ಕೇವಲ ಇದು ಒಬ್ಬರ ಪ್ರಶ್ನೆಯಲ್ಲ. ಇದು ನನ್ನ ಪ್ರಶ್ನೆಯಲ್ಲ. ಆದ್ದರಿಂದ ಮಾನ್ಯ ಬಂಗಾರಪ್ಪನವರನ್ನು ಮತ್ತು ಮಾನ್ಯ ಕೆ. ಎಚ್. ಪಾಟೀಲ್‌ರವರನ್ನು ಕರೆಸುತ್ತೇನೆ, ಅವರುಗಳು ಸಲಹೆಯನ್ನು ಕೊಡಲಿ, ಅವರ ಸಲಹೆಗಳನ್ನು ಸ್ವೀಕಾರ ಮಾಡುತ್ತೇನೆಂದು ಹೇಳಿ ಈವತ್ತಿನ ಪರಿಸ್ಥಿಯಲ್ಲಿ ಅವರನ್ನು ಮುಂದುವರಿಸಲು ಸಾಧ್ಯವಿಲ್ಲವೆಂದು ಹೇಳಬಯಸುತ್ತೇನೆ.

(v) ಬೆಂಗಳೂರಿನ ಪೊಟರಿಟೌನ್ ಕಾರ್ಪೊರೇಷನ್ ಶಾಲೆಯ ಹತ್ತಿರ ಯುವತಿಯ ಮೇಲೆ ಸಾಮೂಹಿಕ ಅತ್ಯಾಚಾರ ಮಾಡಿರುವ ಬಗ್ಗೆ

ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ).—ಮಾನ್ಯ ಅಧ್ಯಕ್ಷರೇ ಪ್ರಜಾವಾಣಿ ಪತ್ರಿಕೆಯಲ್ಲಿ ಇಂದು ''ರೌಡಿಗಳಿಂದ ಯುವತಿ ಮೇಲೆ ಅತ್ಯಾಚಾರ'' ಎಂಬ ಶಿರ್ಷಿಕೆಯಲ್ಲಿ ಭಾನುವಾರ ರಾತ್ರಿ ಪೊಟರಿಟೌನ್‌ನ ಕಾರ್ಪೊರೇಷನ್ ಶಾಲೆಯ ಸಮೀಪದಲ್ಲಿ ರಾತಿ ೮-೩೦ ಸಮಯದಲ್ಲಿ ೨೪ ವಯಸ್ಸಿನ ಯುವತಿಯೊಬ್ಬಳ ಮೇಲೆ ಕೆಲವು ಗುಂಡಾಗಳು ಸಾಮೂಹಿಕ ಅತ್ಯಾಚಾರ ಮಾಡಿರುವುದಾಗಿ ಆ ಸಮಯದಲ್ಲಿ ಅವರ ಜೊತೆ ಮದುವೆ ಆಗಲಿದ್ದ ಯುವಕನಲ್ಲದೆ, ಮತ್ತೊಬ್ಬ ಅವರ ಸ್ನೇಹಿತನೊಬ್ಬನೂ ಇದ್ದನೆಂದು ತಿಳಿದು ಬಂದಿರುತ್ತೆ.

ನಗರದಲ್ಲಿ ರಾತ್ರಿ ಎಲ್ಲರೂ ಓಡಾಡುತ್ತಿರುವ ಸಮಯದಲ್ಲಿ, ಬೇರೆ ಯುವಕರು ಜೊತೆಯಲ್ಲಿದ್ದ ಸಮಯದಲ್ಲಿ ಈರೀತಿ ಅತ್ಯಾಚಾರ ನಡೆಸಿರುವ ಪ್ರಕರಣದಿಂದ ನಗರದಲ್ಲಿ ವಾಸ ಮಾಡುತ್ತಿರುವ ಇತರ ಜನ ಭಯಭೀತರಾಗಿರುವುದರಿಂದ ಇದರ ಬಗ್ಗೆ ಸರ್ಕಾರದ ಗಮನ ಸೆಳೆಯಬಯಸುತ್ತೇನೆ.

ಶ್ರೀ ಬಿ. ರಾಚಯ್ಯ (ಗೃಹ ಸಚಿವರು). —

''On 28-7-85 at 23.15 Hours, Smt. Amla, daughter of Shri George, aged about 24 years, a resident of Venkateshpura, K. G. Hally, Bangalore City, came to Fraser Town Police Station, accompanied by her boy friend Sridhar, and lodged a complaint to the effect that the same day at about 20-30 Hours, she on her way to her house, along with Sridhar and another boy Raja, after visiting Lingaralapuram, via, Clarke Road, Richards Town. At thattime, they came across 6 persons, out of whom 4 were know to her, Viz., Achu, Raja, Kumar and Raghu, as they reside in the same area where she lives. One by one, these persons asked Sridhar and Raja as to who ''this girl'' (the complainant, Smt. Amla) was. Simultan-

eously, they slapped both of them that "this girl" (Smt. Amla) was his would-be wife and that he was going to marry her. At this, they threatened her (Smt. Amla) and forcibly took her away to the Pottery Town Corporation School compound, where, one after the other, 3 of them raped her against her will at about 9.30 P. M. As she raised an alarm, some neighours came there. On seeing them, the accused persons ran away. The neighbours chased them, but they managed to escape. Meanwhile, Sridhar and Raja had escaped from the scene Out of fright However, they ware making a search for her, and only when she returned after this incident, Sridhar and Smt. Amla (victim) came to the Police Station and lodged this complaint.

On receipt of this complaint, a case was registered in Cr. No. 306/85 u/s 376, 323 r/w 34 IPC against the accused persons, and a man-hunt was launched to apprehend them. A night-long search was made at their residences and at other places which were learnt to be their hide-outs in the City but they could not be traced.

The victim girl, Smt. Amla, was sent to Bowring Hospital for examination and treatment. The Medical Report is still to be received. All the 4 persons mentioned in the complaint of Smt. Bmla (victim), reside in the same area, and, as such, she knew their names. Out of them, Achu is a rowdysheeted persons of K. G. Hally Police Station, and a proposal to detain him under the provisions of the Karnataka Prevention of Dangerous of Bootleggers, Drug-Offenders, Gamblers, Goondas, Immoral Traffic Offenders and Slum-grabbers

Confidential enquiries, in this case, show that one of the accused persons probably wanted to marry the victim, Smt. Amla, but, on coming to know that Sridhar was going to marry her, appears to have committed this offence and instigated the others also to join him. However, this information is being verified.

The case is under investigation. All the 4 known accused persons are stated to be working as Coolies in some factory in Hosur. Efforts are being made to apprehend the accused persons, whose identity is know. A special team of Officers has been formed to apprehend them.

It is learnt that one person Raja has been arrested last night.

VI ಕುಂದಾಪುರದ ಗಂಗೊಳ್ಳಿ ಹೊಳೆಯಲ್ಲಿ ದೋಣಿ ದುರಂತದಲ್ಲಿ ಸತ್ತವರ ಕುಟುಂಬದವರಿಗೆ ಕೊಡಬೇಕಾದ ಪರಿಹಾರ

ಶ್ರೀ ಕೆ. ಪ್ರತಾಪಚಂದ್ರಶೆಟ್ಟಿ (ಕುಂದಾಪುರ).—ದಿನಾಂಕ ೨೪-೬-೧೯೮೫ರಂದು ಅಪರಾಹ್ನ ಘಂಟೆ ೩-೩೦ಕ್ಕೆ ಕುಂದಾಪುರದ ಸಮೀಪವಿರುವ (ಬಬ್ಬುಕುದ್ರು) ಗಂಗೊಳ್ಳಿ ಹೊಳೆಯಲ್ಲಿ ವಿಹಾರಿಸಿ ಹಿಡಿಯುತ್ತಿದ್ದ (೧) ಶ್ರೀಯುತ ಸುಧಾಕರ ನಾಯಕ (೨) ಬಾಬು ನಾಯಕ ಮತ್ತು (೩) ರಘು